**ಸಾಕ್ಷಿಯನ್ನು ದಿಃ *07/07/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು : ಶ್ರೀ ಹೆಚಟಿಎನ ವಕೀಲರಿಂದ ಪ್ರತಿವಾದಿ ನಂ.8 ರಿಂದ 10 ಪರವಾಗಿ.***

ಜೆಡಿಎಲಆರ್ ಮೈಸೂರಿಗೆ ವರ್ಗಾಯಿಸಬೇಕು ಎಂದು ಹೇಳಿರುವ ಅರ್ಜಿಯನ್ನು ನಾನು ಈ ದಿನ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಆದೇಶ ಜೆಡಿಎಲಆರ್ ಮೈಸೂರ ಇವರು ನ್ಯಾಯಾಲಯದಲ್ಲಿ ಅಸಲು ದಾವೆ ನಂ.228/2022 ಮತ್ತು ಕೆಎಟಿ ಅಫೀಲು 68/2022 ಇರುವ ಕಾರಣ ಅದನ್ನು ಉಲ್ಲೇಖಿಸಿ ಅಫೀಲನ್ನು ವಜಾ ಮಾಡಿರುತ್ತಾರೆ. ಇದಕ್ಕಿಂತ ಮುಂಚಿತವಾಗಿ 11 ಇ ನಕಾಶೆ ಪ್ರಶ್ನಿಸಿ ಡಿಡಿಎಲಆರ ಮುಂದೆ ಹೂಡಿರುವ ಅಫೀಲು ಸಹ ನ್ಯಾಯಾಲಯದಲ್ಲಿರುವ ಅಸಲು ದಾವೆ ನಂ.228/2022 ಮತ್ತು ಕೆಎಟಿ ಅಫೀಲು 68/2022 ಇರುವ ಕಾರಣಗಳಿಗೆ ಅದನ್ನು ಉಲ್ಲೇಖಿಸಿ ಅಫೀಲನ್ನು ವಜಾ ಮಾಡಿರುತ್ತಾರೆ.

ಆರ್.ಎಸ್.ನಂ. 32/27 ರ ಕ್ಷೇತ್ರ 11 ಎಕರೆ ಇರುತ್ತದೆ. ಸದರಿ ಜಮೀನಿನ 11 ಇ ನಕಾಶೆಯ ಉತ್ತರ ದಿಕ್ಕಿಗೆ ಏನೂ ಬರುತ್ತದೆ ಎಂದು ನಾನು ನಕಾಶೆ ನೋಡಿ ಹೇಳಬಹುದು. ಈ ರೀತಿ ಇರುವ ನಕಾಶೆ ಹಾಜರುಪಡಿಸಿದ್ದೇನೆ ಇಲ್ಲವೊ ನನಗೆ ನೆನಪಿಲ್ಲ. ಡಿಡಿಎಲಆರ ಸದರಿ ಜಮೀನಿನ ಉತ್ತರ ದಿಕ್ಕಿಗೆ ಉಲ್ಲೇಖವಿರುವ ಜಮೀನು ಮತ್ತು ಖರೀದಿ ಮಾಡಿರುವ ಜಮೀನಿನ ಉತ್ತರ ದಿಕ್ಕಿನ ಜಮೀನಿಗೆ ಎರಡು ಒಂದಕ್ಕೊಂದು ತಾಳೆ ಆಗುವುದಿಲ್ಲ ಎನ್ನುವ ಕಾರಣಕ್ಕೆ ವಜಾ ಮಾಡಿದರು ಎಂದರೆ ಸರಿಯಲ್ಲ. ಜೆಡಿಎಲಆರ್ ಮೈಸೂರನವರು ಸ್ಥಳ ಪಂಚನಾಮೆ ಮಾಡಲು ನೋಟೀಸು ನೀಡಿದರು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಸ್ಥಳ ಪಂಚನಾಮೆ ಮಾಡಿರುವ ಕುರಿತು ನನಗೆ ಮಾಹಿತಿ ಇಲ್ಲ.

ನಾನು ಖರೀದಿ ಮಾಡಿರುವ ಆಸ್ತಿಯ ಮಾರಾಟಗಾರರಾದ ಲಕ್ಷ್ಮಿ ಇಬ್ಬರೂ ಮಕ್ಕಳ ಸಹಿ ಪ್ರತಿ ಪುಟದಲ್ಲಿ ಕಾಣುವುದಿಲ್ಲ ಎಂದರೆ ಪ್ರತಿ ಪುಟದಲ್ಲಿ ಮಾಡುವುದು ಅವಶ್ಯಕತೆಯಿಲ್ಲ ಎಂದು ಹೇಳುತ್ತಾರೆ. ಈ ಇಬ್ಬರೂ ಮಕ್ಕಳ ಸಹಿಗಳನ್ನು ಯಾವ ಕಾರಣಕ್ಕೆ ಪಡೆದರು ಎಂದು ನನಗೆ ಮಾಹಿತಿ ಇಲ್ಲ.

ಸಾಕ್ಷಿದಾರರಿಗೆ ತಾವೇ ಹಾಜರುಪಡಿಸಿರುವ ನಿ.ಪಿ.5 ರಂತೆ ಇರುವ ಮೂಲ ಖರೀದಿ ಪತ್ರದ 6 ನೇ ಪುಟ ಮತ್ತು 7 ನೇ ಪುಟದಲ್ಲಿರುವ ಸಹಿ ಶಿವಪ್ಪಯ್ಯ ಬಿಷ್ವೇಷ ಉರ್ಫ ಮಹಾಪುರುಷ ಇವರ ಸಹಿಗಳ ಮಧ್ಯ ವ್ಯತ್ಯಾಸವಿಲ್ಲ. ಅದೇ ರೀತಿ ಸಣ್ಣಶಿವಪ್ಪಯ್ಯ ಬಿಷ್ವೇಷ ಉರ್ಫ ಮಹಾಪುರುಷ ಇವರ ಸಹಿಗಳು ಸಹ ಎರಡು

ಪುಟಗಳಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಈ ಇಬ್ಬರ ಜನನ ಪ್ರಮಾಣಪತ್ರಗಳನ್ನು ಮುಂದೆ ಹಾಜರುಪಡಿಸುತ್ತೇನೆ.

ಅಸಲು ದಾವೆ ನಂ.68/2010 ರಲ್ಲಿ ವಾದಿಯಾದ ಪ್ರಸ್ತುತ ಪ್ರತಿವಾದಿ ನಂ.1 ಅಮೀತ ಪ್ರಮೋದ ಕಾಮತ ಇವರ ಆಸ್ತಿಗೆ ನಾನು ಸದರಿ ದಾವೆಯಲ್ಲಿ ನೀಡಿರುವ ಪ್ರತಿವಾದ ಪತ್ರದಲ್ಲಿ ವಾದಿಯ ಆಸ್ತಿಗೆ ಯಾವುದೇ ರೀತಿ ಹರಕತ್ತು ಮಾಡುವುದಿಲ್ಲ ಎಂದು ಬರೆದುಕೊಂಡಿದ್ದೇನೆ ಎಂದರೆ ನಿಜ.

ಪ್ರತಿವಾದಿ ನಂ.8 ರಿಂದ 10 ಇವರು ಖರೀದಿ ಮಾಡಿರುವ ಆಸ್ತಿಗಳ ನಂಬರ ನಾನು ನೋಡಿ ಹೇಳಬಹುದು. ಪ್ರತಿವಾದಿ ನಂ.1 ಇವರು ಯಾವ ಇಸ್ವಿಯಲ್ಲಿ ಜಮೀನು ಖರೀದಿ ಮಾಡಿದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನು ಖರೀದಿಸಿದ 4-5 ತಿಂಗಳ ನಂತರ ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ನಂ.1 ಇವರು ಖರೀದಿ ಹಿಡಿಯುವ ಜಮೀನಿನ ನಕಾಶೆ ಮಾಡಿ ಸದರಿ ನಕಾಶೆ ಪ್ರಕಾರ ಖರೀದಿ ಹಿಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಆರ್.ಎಸ್.ನಂ. 32 ಒಟ್ಟು ಕ್ಷೇತ್ರ 305 ಎಕರೆ ಎಂದರೆ ನಿಜ. ಸದರಿ ಜಮೀನು ಮಾರಾಟ ಮಾಡಿದ ನಂತರ ಪ್ರಸ್ತುತ 167 ಎಕರೆ 2 ಗುಂಟೆ ಜಮೀನು ಮಾತ್ರ ಉಳಿದಿರುತ್ತದೆ ಎಂದರೆ ನಿಜ. ಈ ರೀತಿ ಉಳಿದ ಜಮೀನಿನಲ್ಲಿ ಬಿಷ್ವೇಷ ತಂದೆ ಮಹಾದೇವಯ್ಯ ಮಹಾಪುರುಷ ಇವರು ತಮ್ಮ 1/5 ಹಿಸ್ಸೆಯನ್ನು ಉಳವಪ್ಪ ಚೆನ್ನಬಸಪ್ಪ ತಳಗೇರಿ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ಅಮೀತ ಇವರಿಗೆ ಮಾರಾಟ ಮಾಡಿರುವ ಜಮೀನಿನ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.2 ರಿಂದ 7 ಇವರು ಪ್ರತಿವಾದಿ ನಂ.1 ಇವರಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ನಿಜ. ಸದರಿ ಮಾರಾಟದ ಜಮೀನು ಸರ್ವೇ ನಂಬರ 32/2 ಅ ಕ್ಷೇತ್ರ 33 ಎಕರೆ 18 ಗುಂಟೆ ಎಂದರೆ ನಿಜ. ಸದರಿ ಹಳೆಯ ನಂಬರ ಬದಲಾಗಿ ಈಗ ಅದು ಸರ್ವೇ ನಂಬರ 32/1 ಎ/18 ಬಿ/1 ಬಿ ಆಗಿದೆ ಎಂದರೆ ಸಾಕ್ಷಿದಾರರು ಅದರ ಕುರಿತು ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ.

ನನಗೆ ಸುಭಾಶ ಮೋರೆ ಎನ್ನುವವರು ಪರಿಚಯವಿರುತ್ತಾರೆ. ನಾನು ಮತ್ತು ಸದರಿ ಸುಭಾಶ ಇವರು ಪ್ರತಿವಾದಿ ನಂ.1 ಇವರ ಕಬ್ಜೆಗೆ ಹರಕತ್ತು ಮಾಡಿರುವ ಕಾರಣ ಸದರಿಯವರು ಅಸಲು ದಾವೆ ನಂ.

68/2010 ರನ್ನು ಹೂಡಿರುತ್ತಾರೆ ಎಂದರೆ ಸಾಕ್ಷಿದಾರರು ನಾವು ಯಾವುದೇ ರೀತಿ ಹರಕತ್ತು ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಇದೇ ಕುರಿತು ಪ್ರತಿವಾದಿ ನಂ.1 ನಮ್ಮಿಬ್ಬರ ವಿರುದ್ದ ಗ್ರಾಮೀಣ ಪೊಲೀಸಠಾಣೆಯಲ್ಲಿ ದೂರನ್ನು ಸಹ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಪ್ರಸ್ತುತ ಪ್ರತಿವಾದಿ ನಂ.1 ಅಸಲು ದಾವೆ ನಂ.397/2008 ರನ್ನು ಸುಭಾಶ ಮೋರೆ ಇವರ ಮೇಲೆ ಹೂಡಿದ್ದು, ಅದರಲ್ಲಿ ನಾನು ಮತ್ತು ನನ್ನ ಪತ್ನಿ ರೇಖಾ ಬಣವಿ ನಾವು ಸಹ ಅವಶ್ಯಕ ಪಕ್ಷಗಾರರು ಎಂದು ಅರ್ಜಿ ಹಾಕಿರುತ್ತೇವೆ ಎಂದರೆ ನನಗೆ ನೆನಪಿಲ್ಲ. ಸದರಿ ಮಧ್ಯಂತರ ಅರ್ಜಿ ನ್ಯಾಯಾಲಯವು ವಜಾ ಮಾಡಿತು ಎಂದರೆ ನನಗೆ ಗೊತ್ತಿಲ್ಲ.

ಅದೇ ರೀತಿ ಮಡಿವಾಳಪ್ಪ ತಂದೆ ಬಸಪ್ಪ ಹೆಗ್ಗೇರಿ ಅಸಲು ದಾವೆ ನಂ.284/2007 ರನ್ನು ಲಕ್ಷ್ಮಿ ಇವರ ವಿರುದ್ದ ಹೂಡಿರುವ ಬಗ್ಗೆ ಮಾಹಿತಿ ಇದೆ. ಸದರಿ ಪ್ರಕರಣ ರಾಜಿ ಸಂಧಾನದ ಮೂಲಕ ಮುಕ್ತಾಯವಾಯಿತು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ ನಂ.8 ರಿಂದ 10 ಇವರು ಖರೀದಿಸಿರುವ ಜಮೀನಿನ ಉತಾರದಲ್ಲಿ ಅವರ ಹೆಸರುಗಳು ನಮೂದು ಆಗಿವೆ ಎಂದರೆ ನಿಜ. ಈ ರೀತಿ ಖರೀದಿ ಜಮೀನಿನಲ್ಲಿ ಸದರಿಯವರು ಇವತ್ತಿಗೂ ಸಹ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದ 17 ನೇ ಖಂಡಿಕೆಯಲ್ಲಿ ಅಸಲು ದಾವೆ ನಂ.68/2010 ರ ಕುರಿತು ಹೇಳಿರುವ ವಿಷಯ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನಮ್ಮದಾಖಲಾತಿಗಳು ಸರಿಯಿರಲಾರದ ಕಾರಣ ಪ್ರತಿವಾದಿ ನಂ.8 ರಿಂದ 10 ಖರೀದಿ ಹಿಡಿದ ಜಮೀನು ಅಸ್ತಿತ್ವದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಎದುರುದಾರರ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.